# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/173/ಸಾ.ಸ./2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 26-02-2024

**ಗೆ,**

*ಸಿಂಡಿಕೇಟ್ ಸದಸ್ಯರು,*
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 20-02-2024ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳು.

***

ದಿನಾಂಕ 20-02-2024 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 009, ಇಲ್ಲಿ ಜರುಗಿದ 173ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

26/2/24

**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/173/ಸಾ.ಸ./2023-24

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 26.02.2024

**ದಿನಾಂಕ 20-02-2024 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560 001, ಇಲ್ಲಿ ಜರುಗಿದ 173ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಡಾ. ಜಯಕರ ಎಸ್ ಎಂ<br>ಕುಲಪತಿಗಳು | – ಸಭಾಧ್ಯಕ್ಷರು |
| 2. | ಡಾ. ಮಾಲಿನಿ ಕೆ | – ಸದಸ್ಯರು |
| 3. | ಶ್ರೀ ರವೀಂದ್ರ ಪೈ | – ಸದಸ್ಯರು |
| 4. | ಪ್ರೊ. ಸಿ ನಾಗಭೂಷಣ | – ಸದಸ್ಯರು |
| 5. | ಶ್ರೀ ಗುರುಪ್ರಸಾದ್ ಬಿ ಜಿ | – ಸದಸ್ಯರು |
| 6. | ಶ್ರೀ ವಿಶ್ವನಾಥ್ ಜೆ | – ಸದಸ್ಯರು |
| 7. | ಪ್ರೊ. ಸಿ. ಶ್ರೀನಿವಾಸ್,<br>ಕುಲಸಚಿವರು (ಮೌಲ್ಯಮಾಪನ) | – ಸದಸ್ಯರು |
| 8. | ಶ್ರೀ ಶೇಕ್ ಲತೀಫ್, ಕೆ.ಎ.ಎಸ್.<br>ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 9. | ಡಾ. ಎಂ. ಸುನಿತಾ<br>ವಿತ್ತಾಧಿಕಾರಿಗಳು | – ವಿಶೇಷ ಆಹ್ವಾನಿತರು |

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ನೂತನವಾಗಿ ಸಿಂಡಿಕೇಟ್‌ಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ. ಸಿ ನಾಗಭೂಷಣ, ಹಿರಿಯ ಡೀನರು ಕಲಾ ನಿಕಾಯ ಇವರನ್ನು ಸಭೆಗೆ ಪರಿಚಯಿಸಿ ಅವರಿಗೂ ಸಹ ಸ್ವಾಗತ ಕೋರಿದರು. ಅವರು ಮುಂದುವರೆದು, ಸಿಂಡಿಕೇಟ್ ಸದಸ್ಯರಾಗಿ ಕಾರ್ಯ ನಿರ್ವಹಿಸಿ ನಿರ್ಗಮಿಸಿದ, ಡಾ. ಪೌಲ್ ವಿಜಯನ್, ಅವರ ಸೇವೆಯನ್ನು ಸ್ಮರಿಸಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲು ಕುಲಪತಿಯವರನ್ನು ಕೋರಿದರು.

ಕುಲಪತಿಯವರು ಸದಸ್ಯರುಗಳಿಗೆ ಮತ್ತೊಮ್ಮೆ ಸ್ವಾಗತ ಕೋರಿ ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯ ದಿನಾಂಕದಿಂದ ಇಂದಿನ ದಿನಾಂಕದವರೆಗೆ ವಿಶ್ವವಿದ್ಯಾಲಯದಲ್ಲಿ ಆಗಿರುವ ಬೆಳವಣಿಗೆಗಳ ಕುರಿತು ಸಿಂಡಿಕೇಟ್‌ಗೆ ಕೆಳಕಂಡ ಮಾಹಿತಿಯನ್ನು ನೀಡಿದರು.

26/2/24

1. ಕಳೆದ ಸಾಲಿನಲ್ಲಿ, ವಿಶ್ವವಿದ್ಯಾಲಯದ ನ್ಯಾಕ್ ಮರು-ಮೌಲ್ಯಮಾಪನಕ್ಕೆ ನ್ಯಾಕ್ ಸಮಿತಿ ಭೇಟಿ ನೀಡುತ್ತಿದ್ದ ಸಮಯದಲ್ಲಿ, IQAC ನಿರ್ದೇಶಕರು ಹಾಗೂ ಎಲ್ಲಾ ಶಿಕ್ಷಕ ವೃಂದದವರು NAAC ಮರು ಮೌಲ್ಯಮಾಪನ ಸಂಬಂಧ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರಿಂದ ವಿಶ್ವವಿದ್ಯಾಲಯವು NIRF Ranking ಗೆ ಸಂಪೂರ್ಣವಾದ ಮಾಹಿತಿಯನ್ನು ಒದಗಿಸದ ಕಾರಣ ವಿಶ್ವವಿದ್ಯಾಲಯಕ್ಕೆ 2023ರ NIRF Ranking ಬಂದಿರುವುದಿಲ್ಲ. ಕಳೆದ ಸಾಲಿನಲ್ಲಿ ಅಂಕಿ ಅಂಶಗಳನ್ನು ಸರಿಪಡಿಸಿ ಸಲ್ಲಿಸಲು ಸಂಬಂಧಪಟ್ಟವರೊಂದಿಗೆ ಮನವಿ ಸಲ್ಲಿಸಿ, ಪ್ರಸಕ್ತ ಸಾಲಿನಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಅಂಕಿ ಅಂಶಗಳನ್ನು ಸಲ್ಲಿಸಲಾಗಿದೆ.

2. ವಿಶ್ವವಿದ್ಯಾಲಯವು NAAC, A++ ಶ್ರೇಯಾಂಕ ಹೊಂದಿರುವುದರಿಂದ PM-USHA ಯೋಜನೆಯಡಿಯಲ್ಲಿ ಅನುದಾನ ಮಂಜೂರಾತಿಗೆ ಸಂಪೂರ್ಣ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯವು ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಪ್ರಸ್ತಾವನೆಯನ್ನು Multi-Disciplinary Education and Research Universities (MERU) ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಮುಖವೆಂದು ಪರಿಗಣಿಸಿ ರೂ.100.00 ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿರುತ್ತಾರೆ. ಸದರಿ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಗುಣಮಟ್ಟದ ಸಂಶೋಧನೆ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿ ನಮ್ಮ ಮುಂದೆ ಇದೆ ಎಂದು ತಿಳಿಸಿ ಈ ಯೋಜನೆ ವಿವರಗಳನ್ನು ಸಂಪೂರ್ಣವಾಗಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಕಾರ್ಯಗತಗೊಳಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳೋಣವೆಂದು ತಿಳಿಸಿದರು.

3. ರಾಮನಗರ ಸ್ನಾತಕೋತ್ತರ ಕೇಂದ್ರಕ್ಕೆ ಈ ಹಿಂದೆ ನಿರ್ದೇಶಕರಾಗಿ ನೇಮಕ ಮಾಡಲಾಗಿದ್ದು ಪ್ರೊ. ಕೆ. ರಾಮಕೃಷ್ಣಯ್ಯ ಅವರು ಈ ಹೆಚ್ಚುವರಿ ಕಾರ್ಯಭಾರ ಬೇಡವೆಂದು ಮನವಿ ಸಲ್ಲಿಸಿದ್ದುದರಿಂದ, ಪ್ರೊ. ಸಮತಾ ಬಿ ದೇಶಮಾನೆ ಅವರನ್ನು ನಿರ್ದೇಶಕರನ್ನಾಗಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನೇಮಕ ಮಾಡಲಾಗಿತ್ತು. ಆದರೆ, ಅವರು ನಿರ್ದೇಶಕರ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಆಸಕ್ತಿವಹಿಸಲಿಲ್ಲ ಹಾಗೂ ಬೇರೆ ಹಿರಿಯ ಪ್ರಾಧ್ಯಾಪಕರು ಸಹ ಈ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮುಂದೆ ಬರದ ಕಾರಣ, ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಪ್ರೊ. ಡೊಮಿನಿಕ್ ಅವರನ್ನು ತಾತ್ಕಾಲಿಕವಾಗಿ ರಾಮನಗರ ಸ್ನಾತಕೋತ್ತರ ಕೇಂದ್ರ ನಿರ್ದೇಶಕರನ್ನಾಗಿ ನೇಮಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

   ಪ್ರೊ. ಡೊಮಿನಿಕ್ ಅವರಿಗೆ ನಿರ್ದೇಶಕರಾಗಿ ಹೆಚ್ಚುವರಿ ಕಾರ್ಯಭಾರ ನೀಡಿರುವ ಕ್ರಮಕ್ಕೆ ಸಿಂಡಿಕೇಟ್ ಅನುಸಮರ್ಥಿಸಿತು.

 26/2/24

4. ಶ್ರೀ ಸೋಮನಾಥ್ ಎಸ್., ಅಧ್ಯಕ್ಷರು, ಐ.ಎಸ್.ಆರ್.ಒ., ಇವರನ್ನು 58ನೇ ವಾರ್ಷಿಕ ಘಟಿಕೋತ್ಸವದಲ್ಲಿ ಡಿ.ಎಸ್ಸಿ. ಗೌರವ ಡಾಕ್ಟರೇಟ್ ಪದವಿಗೆ ಮಾನ್ಯ ರಾಜ್ಯಪಾಲರು ಸ್ವೀಕರಿಸಿದ್ದರು. ಆದರೆ, ಅವರು ದಿನಾಂಕ:17.10.2023ರಂದು ಜರುಗಿದ ವಾರ್ಷಿಕ ಘಟಿಕೋತ್ಸವದಲ್ಲಿ ಕಾರಣಾಂತರಗಳಿಂದ ಉಪಸ್ಥಿತರಿರದ ಕಾರಣ, ದಿನಾಂಕ; 21.02.2024ರಂದು ಸಂಜೆ 6.00 ಗಂಟೆಗೆ ರಾಜಭವನದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಲು ಒಪ್ಪಿರುವುದರಿಂದ, ಮಾನ್ಯ ಸಿಂಡಿಕೇಟ್ ಸದಸ್ಯರೆಲ್ಲರೂ ಸದರಿ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರಿದರು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 01**: ದಿನಾಂಕ 28.12.2023 ರಂದು ಜರುಗಿದ 172ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 28.12.2023 ರಂದು ಜರುಗಿದ 172ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 02**: ದಿನಾಂಕ 28.12.2023 ರಂದು ಜರುಗಿದ 172ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 28.12.2023 ರಂದು ಜರುಗಿದ 172ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳನ್ನು (ATR) ಪರಿಗಣಿಸಿ ಅನುಮೋದಿಸಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 3.** ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿ), ಬೆಂಗಳೂರು ಇವರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಶ್ರೀ ವೆಂಕಟರಾಮಣ್ಣ ಇವರಿಗೆ ಬದಲಾಗಿ ನೇಮಕ ಮಾಡುವ ಬಗ್ಗೆ.

ಕುಲಸಚಿವರು ಮಾತನಾಡಿ, ಆಯ-ವ್ಯಯ, ಲೆಕ್ಕ ಸಮನ್ವಯಗೊಳಿಸುವಿಕೆ, ಜಿ.ಎಸ್.ಟಿ., ನಿಶ್ಚಿತ ಠೇವಣಿ ಹೂಡಿಕೆ, ಈ ವಿಷಯಗಳಲ್ಲಿ ಪರಿಣಿತರ ಸೇವೆಯು ಅವಶ್ಯಕವೆಂದು ವಿತ್ತಾಧಿಕಾರಿಗಳು ಶಿಫಾರಸ್ಸು ಮಾಡಿದ್ದ ಕಾರಣ, ಹಾಗೂ ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರಾಗಿ



26/2/24

ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟರಾಮಣ್ಣ, ನಿವೃತ್ತ ಉಪ ನಿಯಂತ್ರಕರು, ಲೆಕ್ಕ ಪತ್ರಗಳ ಇಲಾಖೆ, ಇವರ ಸೇವೆಯು 31.03.2024ಕ್ಕೆ ಮುಕ್ತಾಯಗೊಳ್ಳುತ್ತಿರುವುದರಿಂದ, ಇವರ ಜಾಗದಲ್ಲಿ ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), ಕೆ.ಎಸ್.ಎಫ್.ಸಿ. ಇವರನ್ನು ವಿತ್ತಾಧಿಕಾರಿಯವರ ಶಿಫಾರಸ್ಸಿನಂತೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸಮಾಲೋಚಕರಾಗಿ (ಲೆಕ್ಕ ಸಮನ್ವಯಕ್ಕೋಸ್ಕರ) ಮಾಹೆಯಾನ ರೂ.55,000/- ಸಂಭಾವನೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಆದೇಶವನ್ನು ಸಿಂಡಿಕೇಟ್ ಅನುಸಮರ್ಥನೆಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಹೆಚ್. ಎನ್. ಭಾಸ್ಕರ್, ವ್ಯವಸ್ಥಾಪಕರು (ನಿವೃತ್ತ), ಕೆ.ಎಸ್.ಎಫ್.ಸಿ. ಬೆಂಗಳೂರು, ಇವರನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಶ್ರೀ ವೆಂಕಟರಾಮಣ್ಣ ಇವರ ಬದಲಾಗಿ ದಿನಾಂಕ: 01.02.2024ರಿಂದ ಒಂದು ವರ್ಷದ ಅವಧಿಗೆ ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.



**ವಿಷಯ ಸಂಖ್ಯೆ 04**: ಬೆಂಗಳೂರು ವಿಶ್ವವಿದ್ಯಾಲಯದ ಜೀವ ವಿಜ್ಞಾನ ವಿಭಾಗದಲ್ಲಿ ನಡೆಸಲಾಗುತ್ತಿರುವ "PG Diploma Course in Clinical Embryology and Assisted Reproductive Technology" ಕೋರ್ಸ್‌ನ್ನು ಮುಂದುವರೆಸುವ ಬಗ್ಗೆ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ 2013ರಿಂದ ನಡೆಸಲಾಗುತ್ತಿರುವ "PG Diploma Course in Clinical Embryology and Assisted Reproductive Technology" ಕೋರ್ಸಿನ ವಿವರ ಹಾಗೂ ಸದರಿ ಕೋರ್ಸಿಗೆ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿರುವ ಇಬ್ಬರು ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಕುರಿತು ಹಾಗೂ ಸದರಿ Self Financing ಕೋರ್ಸಿನಿಂದ ಬರುತ್ತಿರುವ ಆದಾಯ ಮತ್ತು ವೆಚ್ಚಗಳ ಬಗ್ಗೆ ವಿವರ ನೀಡಿ, ಮೇಲ್ಕಂಡ ಕೋರ್ಸನ್ನು ರದ್ದುಪಡಿಸುವ ಕುರಿತು, ದಿನಾಂಕ: 18.01.2024ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡಾವಳಿಗಳ ವಿವರಗಳನ್ನು ಸಭೆಗೆ ಮಂಡಿಸಿ, ಸದರಿ ಕೋರ್ಸಿನ ಪಾಠ ಪ್ರವಚನಕ್ಕೆ ನೇಮಕಗೊಂಡಿರುವ ಇಬ್ಬರು ಗುತ್ತಿಗೆ ಆಧಾರದ ಅಧ್ಯಾಪಕರುಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೊಕದ್ದಮೆಯ ಈಗಿನ ವಸ್ತು ಸ್ಥಿತಿಯನ್ನು ಸಿಂಡಿಕೇಟ್ ಗಮನಕ್ಕೆ ತಂದರು.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ 2013ರಿಂದ ನಡೆಸಲಾಗುತ್ತಿರುವ "PG Diploma Course in Clinical Embryology and Assisted Reproductive Technology" ಕೋರ್ಸನ್ನು ರದ್ದುಪಡಿಸುವ ಬಗ್ಗೆ



26/2/24

ಕಾನೂನು ಅಭಿಪ್ರಾಯ ಪಡೆದುಕೊಂಡು, ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಕುಲಪತಿಗಳಿಗೆ ಸಿಂಡಿಕೇಟ್ ಅಧಿಕರಿಸಿ, ಸದರಿ ವಿಷಯದಲ್ಲಿ ಎಂ.ಎಸ್ಸಿ. ಕೋರ್ಸನ್ನು ಪ್ರಾರಂಭಿಸುವ ಬಗ್ಗೆ ಸಾಧಕ ಬಾಧಕಗಳನ್ನು ಪರಿಶೀಲಸಬೇಕೆಂದು ಸೂಚಿಸಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 05**: ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ನಾಗರತ್ನ ಎಂ, ಗ್ರೂಪ್ 'ಡಿ' ಇವರ ಪರೀಕ್ಷಾರ್ಥ ಅವಧಿಯನ್ನು 'ತೃಪ್ತಿಕರ' ಎಂದು ಘೋಷಿಸುವ ಬಗ್ಗೆ.

**ನಿರ್ಣಯ:**

ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀಮತಿ ನಾಗರತ್ನ ಎಂ, ಗ್ರೂಪ್ 'ಡಿ' ಇವರ ಪರೀಕ್ಷಾರ್ಥ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1977 (3) ಮತ್ತು ಪದವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ದಿನಾಂಕ: 21.12.2023ರಂದು 'ತೃಪ್ತಿಕರ'ವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 06**: ಶ್ರೀ ಪ್ರಸನ್ನ.ಎಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಸ್ವತಂತ್ರ ಪ್ರಭಾರ) ಲೋಕೋಪಯೋಗಿ ಇಲಾಖೆ ಇವರ ಎರವಲು ಸೇವಾ ಷರತ್ತು ಮತ್ತು ನಿಬಂಧನೆಗಳು ಅಂಗೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ:01.09.2023ರಂದು ಪೂರ್ವಾಹ್ನ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕರ್ತವ್ಯಕ್ಕೆ ಹಾಜರಾಗಿರುವ ಶ್ರೀ ಪ್ರಸನ್ನ ಎಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಸ್ವತಂತ್ರ ಪ್ರಭಾರ) ಲೋಕೋಪಯೋಗಿ ಇಲಾಖೆ ಇವರ ಎರವಲು ಸೇವಾ ಷರತ್ತು ಮತ್ತು ನಿಬಂಧನೆಗಳು ಸಿಂಡಿಕೇಟ್ ಅನುಮೋದಿಸಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 07**: ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರಡಿ ನಿಯಂತ್ರಿಸಲ್ಪಡುವ ಸಂಯೋಜನೆಗೊಳಿಸುವ ಹಾಗೂ ಏಕಾತ್ಮಕ ವಿಶ್ವವಿದ್ಯಾಲಯಗಳು ಸಹ ಸೇರಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಅನ್ವಯಿಸುವಂತೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಿಗೆ ಏಕರೂಪದ ಪರೀಕ್ಷಾ ಸಂಭಾವನೆಯನ್ನು ಗೊತ್ತುಪಡಿಸಲು ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸುವ ಕುರಿತು.

ಅಧ್ಯಕ್ಷರ ಅನುಮತಿಗೊಳಪಟ್ಟು, ಕುಲಸಚಿವರು (ಮೌಲ್ಯಮಾಪನ) ಅವರು ವಿಷಯವನ್ನು ಮಂಡಿಸಿ, ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಏಕ ರೂಪದ ಪರೀಕ್ಷಾ ಸಂಭಾವನೆ ಹಾಗೂ ಏಕರೂಪದ ವಿದ್ಯಾರ್ಥಿ ಶುಲ್ಕವನ್ನು ಗೊತ್ತುಪಡಿಸಲು ಹಾಗೂ ಪರೀಕ್ಷಾ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಲು ಕುರಿತು ವರದಿ ನೀಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯ ವರದಿಯನ್ನು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕಳುಹಿಸಿ, ಸದರಿ ಸಮಿತಿಯ ಶಿಫಾರಸ್ಸಿನನ್ವಯ ವಿವಿಧ ಶುಲ್ಕಗಳನ್ನು ನಿಯಮಾನುಸಾರ ಅಳವಡಿಸಿಕೊಳ್ಳಲು ಸೂಚನೆ ನೀಡಿರುತ್ತದೆ. ಆದಕಾರಣ ಏಕರೂಪದ ಪರೀಕ್ಷಾ ಸಂಭಾವನೆಗೆ ಅನುಮೋದನೆಯನ್ನು ಪಡೆಯಲು ಈ ಪ್ರಸ್ತಾವನೆಯನ್ನು ಸಿಂಡಿಕೇಟ್‌ಗೆ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಪ್ರಸ್ತಾವನೆಯಲ್ಲಿ ವಿವಿಧ ಪರೀಕ್ಷಾ ಕಾರ್ಯಗಳಿಗೆ ನಿಗದಿಪಡಿಸಲಾದ ಏಕರೂಪದ ಸಂಭಾವನೆ ದರಗಳನ್ನು 2024ರಲ್ಲಿ ನಡೆಯುವ ಪರೀಕ್ಷಾ ಕಾರ್ಯಗಳಿಗೆ ಅನ್ವಯವಾಗುವಂತೆ ಜಾರಿಗೊಳಿಸುವಂತೆ ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ವಿವಿಧ ಪರೀಕ್ಷಾ ಕಾರ್ಯಗಳಿಗೆ ಬರುವ ಶಿಕ್ಷಕರಿಗೆ ಹಾಗೂ ವಿಶ್ವವಿದ್ಯಾಲಯವು ನಡೆಸುವ ನೇಮಕಾತಿ ಸಮಿತಿ ಸಭೆಗೆ ಹಾಜರಾಗುವ ಪರಿಣಿತರಿಗೆ ಸ್ವಂತ ವಾಹನ ಬಳಸಿದಲ್ಲಿ ಅವರಿಗೆ ಪ್ರತಿ ಕಿಲೋ ಮೀಟರ್‌ಗೆ ರೂ.6.00/–ರಂತೆ ಸಾರಿಗೆ ಭತ್ಯೆ/ಕಾರ್ ಮೈಲೇಜ್ ನೀಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 173rd meeting of the Syndicate held on 20.02.2024***

**ವಿಷಯ ಸಂಖ್ಯೆ08**: ಯು.ವಿ.ಸಿ.ಇ ವಿಶ್ವವಿದ್ಯಾಲಯದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ– ಕೊಂಡಿರುವ 10 ಜನ ದಿನಗೂಲಿ ನೌಕರರ ಸೇವೆಯನ್ನು ಮುಂದುವರೆಸುವ ಬಗ್ಗೆ.

ಕುಲಸಚಿವರು ಮಾತನಾಡಿ, ದಿನಾಂಕ:28.12.2023ರ ಸಿಂಡಿಕೇಟ್ ನಿರ್ಣಯದನುಸಾರ ಯು.ವಿ.ಸಿ.ಇ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹತ್ತು ಜನ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನ ನೌಕರರನ್ನು ದಿನಾಂಕ: 03.10.2024ರ ಆದೇಶದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಹಾಸ್ಟೆಲ್ ಹಾಗೂ ಕಛೇರಿಗಳಿಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಅವರ ಸೇವಾ ಅವಧಿಯು ಮುಗಿದಿರುವ ಕಾರಣ ದಿನಾಂಕ: 05.01.2024 ರಿಂದ ಆರು ತಿಂಗಳ ಅವಧಿಗೆ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರ ದಿನಗೂಲಿ /ಮಾಸಿಕ ಕ್ರೋಢೀಕೃತ ನೌಕರರನ್ನು ದಿನಾಂಕ:12.06.2023ರಿಂದ 11.06.2024ರ ಒಂದು ವರ್ಷದ ಅವಧಿಗೆ ಮುಂದುವರೆಸಿರುವುದರಿಂದ, ಮೇಲ್ಕಂಡ ಹತ್ತು ಜನ ದಿನಗೂಲಿ ನೌಕರರ ಸೇವೆಯನ್ನು ಸಹ ದಿನಾಂಕ; 11.06.2024ರ ವರೆಗೆ ಮುಂದುವರೆಸಬಹುದಾಗಿದೆ ಎಂದು ತಿಳಿಸಿದರು.



26/2/24

ನಿರ್ಣಯ:

ಚರ್ಚೆಯ ನಂತರ, ಯು.ವಿ.ಸಿ.ಇ ಕಾಲೇಜಿನಲ್ಲಿ ಕಾರ್ಯನಿರ್ವಹಿಸಿ ವಿಶ್ವವಿದ್ಯಾಲಯದ ವಿವಿಧ ಹಾಸ್ಟೆಲ್/ಕಛೇರಿಗಳಿಗೆ ವರ್ಗಾವಣೆಗೊಂಡ ಹತ್ತು ಜನ ದಿನಗೂಲಿ/ಮಾಸಿಕ ಕ್ರೋಢೀಕೃತ ವೇತನ ನೌಕರರ ಸೇವೆಯನ್ನು ದಿನಾಂಕ: 05.01.2024ರಿಂದ, ದಿನಾಂಕ: 11.06.2024ರ ವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 173rd meeting of the Syndicate held on 20.02.2024***

**ವಿಷಯ ಸಂಖ್ಯೆ 09**: ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ಪಡೆಯಲು ಪರಿಗಣಿಸುವ ಬಗ್ಗೆ.

ಕುಲಸಚಿವರು ಮಾತನಾಡಿ, ಬ್ಯಾಕ್‌ಲಾಗ್ ಹುದ್ದೆಗಳ ಎದುರಾಗಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವ ಡಾ. ಸುರೇಶ್ ಆರ್, ಡಾ. ಕುಂಬೀ ನರಸಯ್ಯ ಹಾಗೂ ಡಾ. ಸುಶೀಲಾ ಕೆ ಲೆಂಕಣ್ಣನವರ್ ಅವರುಗಳು ಅನುಕ್ರಮವಾಗಿ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರುಗಳಾಗಿ ಸಲ್ಲಿಸಿರುವ ಸೇವೆಯನ್ನು ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ಹೊಂದಲು ಪರಿಗಣಿಸಬೇಕೆಂದು ಕೋರಿದ್ದಾರೆ. ಅವರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನಿರಾಕ್ಷೇಪಣಾ ಪತ್ರ ಪಡೆದು ಯುಕ್ತ ಮಾರ್ಗವಾಗಿ ಅರ್ಜಿ ಸಲ್ಲಿಸಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಗೊಂಡನಂತರ ರಾಜೀನಾಮೆ ನೀಡಿ, ಯುಕ್ತ ಮಾರ್ಗದಲ್ಲಿ ಬಿಡುಗಡೆ ಹೊಂದಿ ವಿಶ್ವವಿದ್ಯಾಲಯದಲ್ಲಿ ವರದಿ ಮಾಡಿಕೊಂಡಿರುತ್ತಾರೆ.

ವಿಶ್ವವಿದ್ಯಾಲಯದ ಶಿಕ್ಷಕರ ಪದೋನ್ನತಿ ಕುರಿತು, ಮಾನ್ಯ ರಾಜ್ಯಪಾಲರಿಂದ ಅನುಮೋದಿನೆಗೊಂಡಿರುವ ಪರಿನಿಯಮಾವಳಿ ಹಾಗೂ ಯು.ಜಿ.ಸಿ. ನಿಯಮಾವಳಿಗಳಲ್ಲಿ ಹಿಂದಿನ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್., ಅಡಿಯಲ್ಲಿ ಪದೋನ್ನತಿ ಅವಕಾಶ ಕಲ್ಪಿಸಿದ್ದರೂ ಸಹ ಸರ್ಕಾರದ ಪತ್ರ ಸಂಖ್ಯೆ ಇಡಿ 9 ಯುಬಿವಿ 2024 ದಿನಾಂಕ:16.01.2024ರ ಮೂಲಕ ರವಾನಿಸಲಾಗಿದ್ದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಐದನೇ ವರದಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

"4) ವಿಶ್ವವಿದ್ಯಾಲಯದ ಹೊರಗೆ ಸಲ್ಲಿಸಿದ ಸೇವೆ ಹಾಗೂ ಅಲ್ಲಿ ಪಡೆಯುತ್ತಿದ ವೇತನ, ಇವುಗಳನ್ನು ಮಾನದಂಡವಾಗಿಟ್ಟುಕೊಂಡು ಮುಂಬಡ್ತಿ ನೀಡಲು ಸರ್ಕಾರದ ಯಾವುದೇ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. ಇದು ಮುಂಬಡ್ತಿ ಕಾನೂನಿಗೆ ವಿರುದ್ಧವಾಗಿದ್ದು, ಹಣಕಾಸು ನಿಯಂತ್ರಣ ಉದ್ದೇಶಕ್ಕೆ ವಿರುದ್ಧವಾಗಿರುವುದರಿಂದ ಇದಕ್ಕೆ ಮಾನ್ಯತೆ ನೀಡಬಾರದೆಂದು ಅಂದಿನ ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು ದಿ:22.04.2014ರಂದು ಉಪ ಕುಲಪತಿಯವರಿಗೆ ನಿರ್ದೇಶನ ನೀಡಿರುವುದಾಗಿಯೂ ಸಹ ಸಮಿತಿಯ ಗಮನಕ್ಕೆ ಬಂದಿರುತ್ತದೆ.



28/2/24

5) ಕೆಲವು ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ಹೊರಗೆ ಸೇವೆ ಸಲ್ಲಿಸಿದ ಅಭ್ಯರ್ಥಿಗಳನ್ನು ವಿಶ್ವವಿದ್ಯಾಲಯದಲ್ಲಿ ಒಂದು ಹುದ್ದೆಗೆ ನೇಮಕಾತಿ ಮಾಡಿಕೊಂಡು, ಅದೇ ದಿನಾಂಕದಂದು ಮುಂದಿನ ಹುದ್ದೆಗೆ ಮುಂಬಡ್ತಿ ನೀಡಿರುವ ಪ್ರಕರಣಗಳು ಸಹ ದಾಖಲೆಗಳಿಂದ ಕಂಡು ಬಂದಿದೆ.

6) UGC Guidelines ಪ್ರಕಾರವಾಗಿ ವಿಶ್ವವಿದ್ಯಾಲಯದ ಹೊರಗೆ ಸಲ್ಲಿಸಿದ ಸೇವೆಯನ್ನು ಕೇವಲ ನೇಮಕಾತಿ ಮಾಡುವಾಗ ಮಾತ್ರ ಪರಿಗಣಿಸಬೇಕೆಂದು AICTE ದಿನಾಂಕ:10.09.2003ರಂದು ಸ್ಪಷ್ಟೀಕರಣ ನೀಡಿದ್ದು, ಇದನ್ನು ಪರಿಗಣಿಸದೇ ನೇಮಕಾತಿ ಹಾಗೂ ಮುಂಬಡ್ತಿಯಲ್ಲಿಯೂ ಖಾಸಗಿ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಲಾಗುತ್ತಿದೆ."

ಆದಕಾರಣ ಈ ಬಗ್ಗೆ ಸಿಂಡಿಕೇಟ್ ಸೂಕ್ತ ನಿರ್ಣಯ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಪ್ರೊ. ಸಿ. ನಾಗಭೂಷಣ ಅವರು ಮಾತನಾಡಿ, ವಿಶ್ವವಿದ್ಯಾಲಯದ ಪರಿನಿಯಮಾವಳಿಗಳಲ್ಲಿ ಹಾಗೂ ಯು.ಜಿ.ಸಿ ನಿಯಮಾವಳಿಗಳಲ್ಲಿ ಶಿಕ್ಷಕರು ಇತರ ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅವಧಿಯನ್ನು ಪರಿಗಣಿಸಿ, ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡಲು ಅವಕಾಶ ಕಲ್ಪಿಸಿರುವುದರಿಂದ ಶಿಕ್ಷಕರ ಮನವಿಯನ್ನು ಪರಿಗಣಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ಅವರು ಮುಂದುವರೆದು, ಈ ಯುವ ಶಿಕ್ಷಕರು ಈಗಾಗಲೇ, DST ಹಾಗೂ ಇತರ ಅನುದಾನ ನೀಡುವ ಸಂಸ್ಥೆಗಳಿಂದ ಪ್ರಾಜೆಕ್ಟ್ ಪಡೆದು ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಅವರನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಐದನೇ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನ ಹಿನ್ನೆಲೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 10 ಹಾಗೂ ಯು.ಜಿ.ಸಿ. ನಿಯಮಾವಳಿ 2018ರಲ್ಲಿ ಕಲ್ಪಿಸಿರುವ ಅವಕಾಶದಂತೆ, ಡಾ. ಸುರೇಶ್ ಆರ್, ಡಾ. ಕುಂಬೀ ನರಸಯ್ಯ ಹಾಗೂ ಡಾ. ಸುಶೀಲಾ ಕೆ ಲೆಂಕಣ್ಣನವರ್ ಅವರುಗಳು ಇತರ ವಿಶ್ವವಿದ್ಯಾಲಯಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡುವ ಬಗ್ಗೆ ಸರ್ಕಾರದ ನಿರ್ದೇಶನ ಕೋರಿ ಪತ್ರ ಬರೆಯಲು ನಿರ್ಣಯಿಸಿತು.

***Proceedings of the 173rd meeting of the Syndicate held on 20.02.2024***

**Item No. 10**: Request for sanction of grant to Prof. Ashok D Hanjagi, Dean, Faculty of Science, BUB to organize Science Day Celebration-reg.

***Resolution:***

After detailed discussion, the Syndicate resolved to sanction Rs.2,50,000/- (Rupees Two Lakh Fifty thousand only) for organizing Science Day Celebration on 15th and 16th of March 2024.



26/2/24

At this point Prof. C Nagabhushan requested to grant financial assistance for organizing similar events from Social Science Departments of the University.

The Registrar informed that only the outcome based programmes will be encouraged.



**ವಿಷಯ ಸಂಖ್ಯೆ 11**: ಮುಖ್ಯಸ್ಥರ ಕಾರ್ಯಭಾರದಿಂದ ಬಿಡುಗಡೆ ಮಾಡುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 12:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಕ್ಕೆ ನಿರ್ದೇಶಕರು/ಮುಖ್ಯಸ್ಥರು/ ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

ವಿಷಯ ಸಂಖ್ಯೆ 11 ಮತ್ತು 12ಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ ಕೆಳಕಂಡ ವಿಭಾಗಗಳಿಗೆ ಅಧ್ಯಕ್ಷರು/ಸಂಯೋಜಕರನ್ನು ಎರಡು ವರ್ಷಗಳ ಅವಧಿಗೆ ಜ್ಯೇಷ್ಠತೆ ಅನುಸಾರ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

| ಕ್ರ.ಸಂ. | ವಿಭಾಗ | ಅಧ್ಯಕ್ಷರು/ಸಂಯೋಜಕರು |
|---|---|---|
| 1. | ಸೂಕ್ಷ್ಮ ಜೀವಶಾಸ್ತ್ರ ಮತ್ತು ಜೀವಂತ್ರಜ್ಞಾನ ವಿಭಾಗ | ಪ್ರೊ. ಕೆ.ಜೆ. ತಾರಾ ಸರಸ್ವತಿಯವರು ದಿನಾಂಕ 11.01.2024ರ ಪತ್ರದಲ್ಲಿ ಕಾರಣಾಂತರಗಳಿಂದಾಗಿ ಸದರಿ ವಿಭಾಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ಸಾಧ್ಯಾವಾಗುತ್ತಿಲ್ಲವೆಂದು ತಿಳಿಸಿರುವುದರಿಂದ, ಪ್ರೊ. ಎಸ್.ಟಿ. ಗಿರೀಶ್, ಅವರನ್ನು ವಿಶ್ವವಿದ್ಯಾಲಯದ ಆದೇಶ ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿಗೆ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ನಿರ್ಣಯಿಸಿತು. |
| 2. | ಕನ್ನಡ ಅಧ್ಯಯನ ಕೇಂದ್ರ | ಪ್ರೊ. ಡಿ. ಡೋಮಿನಿಕ್, ದಿನಾಂಕ:05.03.2024ರಿಂದ 2 ವರ್ಷಗಳ ಅವಧಿಗೆ |
| 3. | ಜೀವ ವಿಜ್ಞಾನ ವಿಭಾಗ | ಪ್ರೊ. ಕೆ. ಶಿವಶಂಕರ್, ದಿನಾಂಕ: 05.03.2024 ರಿಂದ 2 ವರ್ಷಗಳ ಅವಧಿಗೆ |
| 4. | ಶಿಕ್ಷಣ ವಿಭಾಗ | ಡಾ. ಎಂ. ನಾರಾಯಣಸ್ವಾಮಿ ದಿನಾಂಕ: 05.03.2024 ರಿಂದ ಅವರು ವಯೋನಿವೃತ್ತಿ ಹೊಂದುವವರಿಗೆ (31.10.2024)<br>ಡಾ. ವಾಣಿಶ್ರೀ ಕೊಪ್ಪದ್ ಅವರನ್ನು ವಿಭಾಗದ ಸಂಯೋಜಕರಾನ್ನಾಗಿ ದಿನಾಂಕ:01.11.2024ರಿಂದ 2 ವರ್ಷಗಳ ಅವಧಿಗೆ ನೇಮಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು. |
| 5. | ರಸಾಯನಶಾಸ್ತ್ರ ವಿಭಾಗ | ಡಾ. ವೈ ಶಿವರಾಜು, ದಿನಾಂಕ:11.05.2024ರಿಂದ 2 ವರ್ಷಗಳ ಅವಧಿಗೆ |



26/2/24

| | | |
|---|---|---|
| 6. | ಗ್ರಾಮೀಣಾಭಿವೃದ್ಧಿ ಕೇಂದ್ರ | ಪ್ರೊ. ಟಿ. ಹೆಚ್. ಮೂರ್ತಿ, ದಿನಾಂಕ: 31-01-2024 ರಿಂದ ವಯೋನಿವೃತ್ತಿ ದಿನಾಂಕ:31.05.2024ರ ವರೆಗೆ |
| 7. | ಮಹಿಳಾ ಅಧ್ಯಯನ ಕೇಂದ್ರ | ಡಾ. ಸುದೇಷ್ಣ ಮುಖರ್ಜಿ, ದಿನಾಂಕ: 08.04.2024ರಿಂದ 2 ವರ್ಷಗಳ ಅವಧಿಗೆ |
| 8. | ತತ್ವಶಾಸ್ತ್ರ ವಿಭಾಗ | ಪ್ರೊ. ಬಿ ಎನ್ ಶ್ರೀಕೀರ್ತಿ, ಇಂಗ್ಲೀಷ್ ವಿಭಾಗ, ವಿಶ್ವವಿದ್ಯಾಲಯವು ಹೊರಡಿಸುವ ಆದೇಶದಿಂದ ಎರಡು ವರ್ಷಗಳ ಅವಧಿಗೆ ಪ್ರಭಾರ ಅಧ್ಯಕ್ಷರಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು. |

ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ರಘುನಂದನ ಅವರನ್ನು ಪ್ರಭಾರ ಗ್ರಂಥಪಾಲಕರನ್ನಾಗಿ ಮುಂದಿನದ ಆದೇಶದವರೆಗೆ ನೇಮಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

ಮುಂದುವರೆದು, ವಿಶ್ವವಿದ್ಯಾಲಯದ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಬಿ ಎನ್ ಶ್ರೀಕೀರ್ತಿ ಅವರ ಬದಲಾಗಿ ಬೇರೊಬ್ಬ ಪ್ರಾಧ್ಯಾಪಕರನ್ನು ನೇಮಿಸಲು ಸಿಂಡಿಕೇಟ್ ಕುಲಪತಿಯವರಿಗೆ ಅಧಿಕರಿಸಿತು.



**ವಿಷಯ ಸಂಖ್ಯೆ 13:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಗ್ರಂಥಾಲಯಗಳಿಗೆ ಗುತ್ತಿಗೆ ಆಧಾರದ ಮೇಲೆ ಕ್ರೋಢೀಕೃತ ವೇತನದಡಿ ತಾತ್ಕಾಲಿಕವಾಗಿ ಸಹಾಯಕ ಗ್ರಂಥಪಾಲಕರುಗಳನ್ನು ನೇಮಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಗ್ರಂಥಾಲಯಗಳಿಗೆ ಗುತ್ತಿಗೆ ಆಧಾರದ ಮೇಲೆ ಕ್ರೋಢೀಕೃತ ವೇತನದಡಿ ತಾತ್ಕಾಲಿಕವಾಗಿ ಸಹಾಯ ಗ್ರಂಥಪಾಲರುಗಳನ್ನು ನೇಮಕ ಮಾಡಲು ನೇಮಿಸಲಾದ ಆಯ್ಕೆ ಸಮಿತಿಯ ನಡಾವಳಿಯನ್ವಯ ಮಾಹೆಯಾನ ಅವರುಗಳ ಮುಂದೆ ನಮೂದಿಸಿರುವ ಮಾಸಿಕ ಕ್ರೋಢೀಕೃತ ವೇತನದಡಿ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಾಗಿರುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ (ತಾತ್ಕಾಲಿಕವಾಗಿ) ಒಂದು ವರ್ಷದ ಅವಧಿಗೆ ಈ ಕೆಳಕಂಡವರನ್ನು ನೇಮಿಸಲು ಸಿಂಡಿಕೇಟ್ ಅನುಮೋದಿಸಿತು.

| Sl. No. | Name | Consolidated payment per month (in Rs.) |
|---|---|---|
| 1. | Padmavathi N | 36,000-00 |
| 2. | Narayanaswamy B V | 36,000-00 |
| 3. | Shilpa P | 36,000-00 |
| 4. | Siddaramu S N | 36,000-00 |



26/2/24

| | | |
|---|---|---|
| 5. | Chalvadi Nagaraja M | 32,000-00 |
| 6. | Shivaraja O | 36,000-00 |
| 7. | Anka Shetty K | 36,000-00 |

ಮುಂದುವರೆದು, ಈ ಹಿಂದೆ ಗುತ್ತಿಗೆ ಆಧಾರದಡಿ ಕಾರ್ಯನಿರ್ವಹಿಸುತ್ತಿದ್ದ ಏಳು ಸಹಾಯಕ ಗ್ರಂಥಪಾಲಕರ ಸೇವೆಯನ್ನು ಎರಡು ಕಾರ್ಯನಿರತ ದಿನಗಳ ಬಿಡುವು ನೀಡಿ 03.02.2023ರಿಂದ ಒಂದು ವರ್ಷದ ಅವಧಿಗೆ ಅಂದರೆ, 02.02.2024ರವರೆಗೆ ಹಾಗೂ ನಂತರ ಎರಡು ಕಾರ್ಯನಿರತ ದಿನಗಳ ಬಿಡುವು ನೀಡಿ ನೂತನ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 173rd meeting of the Syndicate held on 20.02.2024***

**Item No. 14:** Hiring of vehicles towards examination related works such as distribution of question papers and Squad duty for the examinations held during August/September 2023 and February/March 2024-reg.

The Finance Officer opined that vehicles have to be hired by following KTPP Act. In case no bidder is participated in the Tender process for the second time, vehicles may be hired by obtaining quotations, if the cost of hiring is below 5.00 Lakhs.

The Registrar (Evaluation) informed the Syndicate that Tenders were invited two times for hiring of vehicles for distribution of question papers and other examination related works. Since, no bidders were participated, vehicles were hired for August/September 2023 examinations from M/S MM Tours & Travels who has quoted lowest rates among the three firms and orders were issued with the approval of the Vice-Chancellor. Action has been taken to issue re-tender for hiring vehicles. Hence, the action taken for hiring vehicles from the above firm for examination works for the year 2023-24 at the same rates fixed for the academic year 2022-23 may be ratified.

***Resolution:***

After detailed discussion, the Syndicate resolved to ratify the action taken by the University in hiring vehicles from M/S MM Tours & Travels for the examinations of the academic year 2023-24.



26/2/24

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 15:** 2023-24ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳು ಹಾಗೂ 2024-25ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವ ಬಗ್ಗೆ.

**ನಿರ್ಣಯ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 48(1)ರ ಪ್ರಕಾರ ವಿತ್ತಾಧಿಕಾರಿಯವರ ಸಹಯೋಗದೊಂದಿಗೆ 2023-24ನೇ ಸಾಲಿನ ಪರಿಷ್ಕೃತ ಆಯ-ವ್ಯಯ ಅಂದಾಜುಗಳು ಹಾಗೂ 2024-25ನೇ ಸಾಲಿನ ಆಯ-ವ್ಯಯ ಅಂದಾಜುಗಳನ್ನು ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ತಯಾರಿಸಲು ಮಾನ್ಯ ಕುಲಪತಿಗಳಿಗೆ ಅಧೀಕರಿಸಲು ಸಿಂಡಿಕೇಟ್ ಅನುಮೋದಿಸಿತು.

- ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಪೂರ್ಣ ಹಣ ಒದಗಿಸುವುದು.
- ಹಾಲಿ ಕಟ್ಟಡಗಳ ದುರಸ್ತಿ, ಉಪಕರಣಗಳ ನಿರ್ವಹಣೆ, ಮೂಲಭೂತ ಸೌಕರ್ಯ ಹಾಗೂ ಸಂಶೋಧನೆಗೆ ಅನುದಾನ ಒದಗಿಸುವುದು.
- ಹೊಸ ಕೋರ್ಸುಗಳು, ಕಾರ್ಯಕ್ರಮಗಳು ಹಾಗೂ ಹೊಸ ಕಾಮಗಾರಿಗಳಿಗೆ ಅವಶ್ಯಕತೆ ಹಾಗೂ ಆದ್ಯತೆಯ ಮೇರೆಗೆ ಹಣ ಒದಗಿಸುವುದು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 16:** ಪ್ರೊ. ಕುಮಾರ. ಟಿ, ಫೆಬ್ರವರಿ/ಮಾರ್ಚ್ 2023 ರ 1 ಮತ್ತು 3 ನೇ ಸೆಮಿಸ್ಟರ್ (ಎನ್.ಇ.ಪಿ)ನ ಎಲ್ಲಾ ಸ್ನಾತಕ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಸ್ವೀಕೃತಿ ಮತ್ತು ಸ್ಕ್ಯಾನಿಂಗ್ ಕಸ್ಟೋಡಿಯನ್ನವರಿಗೆ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡುವ ಬಗ್ಗೆ.

2022-23ನೇ ಸಾಲಿನ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಕಾಲೇಜಿನಿಂದ ಪಡೆದು, ನಂತರ ಎ-ಫಾರಂ ಮತ್ತು ಇನ್ವಿಜಿಲೇಷನ್ ಡೈರಿಯೊಂದಿಗೆ ಉತ್ತರ ಪತ್ರಿಕೆಗಳನ್ನು ತಾಳೆ ಮಾಡಿ, ಸಮಪ್ರವಾಗಿ ಪರಿಶೀಲನೆ ಮಾಡಿ ಸ್ಕ್ಯಾನಿಂಗ್ ಕಾರ್ಯಕ್ಕೆ ಕಳುಹಿಸಲು ಹೆಚ್ಚುವರಿಯಾಗಿ ದಿನಗೂಲಿ ನೌಕರರನ್ನು ಪಡೆದಿರುವ ಕಾರ್ಯಕ್ಕೆ ವ್ಯತ್ಯಾಸದ ಹಣವಾದ ರೂ.1,00,750/- (ಒಂದು ಲಕ್ಷದ ಏಳುನೂರಾ ಐವತ್ತು ರೂಪಾಯಿಗಳು) ಅನ್ನು ಒಂದು ಬಾರಿಯ ಕ್ರಮದಂತೆ ಸಂಬಂಧಪಟ್ಟ ಕಸ್ಟೋಡಿಯನ್‌ಗೆ ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 173rd meeting of the Syndicate held on 20.02.2024*

**Item No. 17**: Proceedings of the 11th and 12th meeting of the Committee for acceptance and approval of the Lowest Tenders of the works notified by the engineering division held on 08.12.2023 and 12.01.2024.

***Resolution:***

Syndicate resolved to approve the proceedings of the 11th and 12th Meeting of the Committee for acceptance and approval of the Lowest Tenders of the works notified by the engineering division, held on 08.12.2023 and 12.01.2024 respectively.



26/2/24

**ವಿಷಯ ಸಂಖ್ಯೆ 18:** ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ (ತಾತ್ಕಾಲಿಕವಾಗಿ) ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸೇವೆಯ ಬಗ್ಗೆ.

ಡಾ. ಕೆ. ಮಾಲಿನಿ ಅವರು ಮಾತನಾಡಿ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ (ತಾತ್ಕಾಲಿಕವಾಗಿ) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ವೈಧ್ಯಾಧಿಕಾರಿಗಳ ಸೇವೆಯನ್ನು ಮುಂದುವರೆಸಬೇಕು ಹಾಗೂ ಅವರಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಕ್ರೋಢೀಕೃತ ವೇತನವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಕುಲಪತಿಯವರು ಮಾತನಾಡಿ, ವೈಧ್ಯಾಧಿಕಾರಿಗಳ ಕಾರ್ಯ ನಿರ್ವಹಣೆಯ ಬಗ್ಗೆ ವಿದ್ಯಾರ್ಥಿ ಹಾಗೂ ಸಿಬ್ಬಂದಿಗಳಿಂದ ದೂರುಗಳು ಬಂದಿವೆ. ಆದಕಾರಣ, ಇವರ ವೇತನವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.

ಆಹ್ವಾನಿತರಾಗಿ ಭಾಗವಹಿಸಿದ್ದ ವಿತ್ತಾಧಿಕಾರಿಯವರು ಮಾತನಾಡಿ, ಈ ಸಭೆಯ ಮುಂದೆ ಮಂಡಿಸಿರುವ ಪ್ರಸ್ತಾವನೆಯು ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಬ್ಬರು ವೈಧ್ಯಾಧಿಕಾರಿಗಳ ಸೇವೆಯನ್ನು ಮುಂದುವರೆಸುವ ವಿಷಯದ್ದಾಗಿದೆ. ಅವರ ವೇತನವನ್ನು ಹೆಚ್ಚಿಸಬೇಕೆಂದರೆ, ಹೊಸದಾಗಿ ಪ್ರಕಟಣೆ ನೀಡಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಆರೋಗ್ಯಾಧಿಕಾರಿಗಳ ಸೇವಾವಧಿಯು ಮುಗಿದು ಎರಡು ತಿಂಗಳಾಗಿರುವುದರಿಂದ, ಅವರನ್ನು ಮುಂದುವರೆಸಲು ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಮುಂದಿನ ಅವಧಿಗೆ ಪ್ರಕಟಣೆ ಮೂಲಕ ಅರ್ಜಿಯನ್ನು ಆಹ್ವಾನಿಸಿ, ಸಂದರ್ಶನ ನಡೆಸಿ ನೇಮಕಾತಿ ಮಾಡಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ (ತಾತ್ಕಾಲಿಕವಾಗಿ) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಬ್ಬರು ವೈಧ್ಯಾಧಿಕಾರಿಗಳ ಸೇವೆಯನ್ನು ಈ ಹಿಂದೆ ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ದಿನಾಂಕ: 24.12.2023ರಿಂದ ಆರು ತಿಂಗಳುಗಳ ಅವಧಿಗೆ ಅಥವಾ ಹೊಸದಾಗಿ ಪ್ರಕಟಣೆ ನೀಡಿ ಬದಲಿ ವ್ಯವಸ್ಥೆ ಮಾಡುವ ವರೆಗೂ, ಇದರಲ್ಲಿ ಯಾವುದೇ ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು.



26/2/24

**ವಿಷಯ ಸಂಖ್ಯೆ** 19: 2013 ರಿಂದ 2023ನೇ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆ ಫಲಿತಾಂಶ ಪ್ರಕಟಿಸುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, 2013ರಿಂದ 2023-24ನೇ ಸಾಲಿನವರೆಗೆ ನಡೆದಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಅಂದಾಜು 97 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರೂ ಸಹ ಅವರ ಕೆಲವೊಂದು ಉತ್ತರ ಪತ್ರಿಕೆಗಳು ಸಿಗಲಿಲ್ಲವೆಂದು ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಿರುವುದಿಲ್ಲ. ಸಾಮಾನ್ಯವಾಗಿ ಪ್ರತಿ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಕೂಡಲೇ ಎಲ್ಲಾ ಪ್ರಾಂಶುಪಾಲರುಗಳಿಗೆ ಪರೀಕ್ಷಾ ಫಲಿತಾಂಶದಲ್ಲಿ ವ್ಯತ್ಯಯವಿದ್ದರೆ ಕುಲಸಚಿವರು (ಮೌಲ್ಯಮಾಪನ) ಇವರ ವಿಭಾಗಕ್ಕೆ ಲಿಖಿತ ರೂಪದಲ್ಲಿ ತಿಳಿಸಲು ಸೂಚಿಸಲಾಗುತ್ತದೆ. ಆದರೆ, ಪ್ರಾಂಶುಪಾಲರುಗಳಿಂದ ಈ ವಿದ್ಯಾರ್ಥಿಗಳ ಕುರಿತಂತೆ ಯಾವುದೇ ದೂರು ಬಂದಿರುವುದಿಲ್ಲ. ಆಯಾ ಪರೀಕ್ಷೆಗಳ ಫಲಿತಾಂಶ ಪ್ರಕಟವಾದ ದಿನಾಂಕದಿಂದ ಬಹಳ ದಿನಗಳ ನಂತರ ವಿದ್ಯಾರ್ಥಿಗಳು ಅವರ ಫಲಿತಾಂಶ ಬರದ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಫಲಿತಾಂಶದ ದಿನಾಂಕದಿಂದ ಆರು ತಿಂಗಳು ಮಾತ್ರ ಶೇಖರಿಸಿಡಲಾಗುತ್ತದೆ. ಪ್ರಸ್ತುತ ಈ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಲಭ್ಯವಿರದ ಕಾರಣ ಈ ಹಿಂದೆ ಜರುಗಿದ 167ನೇ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ, ಸದರಿ ವಿದ್ಯಾರ್ಥಿಗಳು ಸಂಬಂಧಪಟ್ಟ ಪರೀಕ್ಷೆಯ ಇತರ ವಿಷಯಗಳಲ್ಲಿ ಪಡೆದುಕೊಂಡ ಅಂಕಗಳ ಸರಾಸರಿ ಆಧಾರದ ಮೇಲೆ ಪತ್ರಿಕೆ ಸಿಗದ ವಿಷಯಕ್ಕೆ ಅಂಕಗಳನ್ನು ನಿಗದಿಪಡಿಸಿ ಪರೀಕ್ಷಾ ಫಲಿತಾಂಶ ಪ್ರಕಟಿಸುವ ಬಗ್ಗೆ ನಿರ್ಣಯಕ್ಕೆ ಸಿಂಡಿಕೇಟ್ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಹಳೆಯ ಪತ್ರಿಕೆಗಳು ಪರೀಕ್ಷಾ ವಿಭಾಗದ ವಿವಿಧ ಕೊಠಡಿಗಳ ಅಲ್ಮಿರಾಗಳಲ್ಲಿ ಲಭ್ಯವಿರಬಹುದು. ಇನ್ನೊಮ್ಮೆ ಎಲ್ಲಾ ವಿಭಾಗಗಳಲ್ಲಿನ ಕೊಠಡಿಗಳನ್ನು ಪರಿಶೀಲಿಸಿ ನಂತರ ಉತ್ತರ ಪತ್ರಿಕೆಗಳು ಸಿಗದ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸುವುದು ಒಳಿತೆಂದು ಅಭಿಪ್ರಾಯಪಟ್ಟರು.

ಕುಲಪತಿಗಳು ಮಾತನಾಡಿ, ವೈಜ್ಞಾನಿಕ ರೀತಿಯಲ್ಲಿ ಈ ವಿಷಯವನ್ನು ಇತ್ಯರ್ಥಪಡಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಿ ಪರೀಕ್ಷಾ ವಿಭಾಗದ ಎಲ್ಲಾ ಕೊಠಡಿಗಳಲ್ಲಿ, ಸ್ಕ್ಯಾನಿಂಗ್ ಸೆಂಟರ್, ಡಿಜಿಟಲ್ ಮೌಲ್ಯಮಾಪನ ಕೇಂದ್ರ ಹಾಗೂ ಅಲ್ಮಿರಾಗಳಲ್ಲಿ ಹುಡುಕಿ ಉತ್ತರ ಪತ್ರಿಕೆಗಳು ಸಿಗದ ವಿದ್ಯಾರ್ಥಿಗಳನ್ನು ಪಟ್ಟಿ ಮಾಡಿ ಲಭ್ಯವಿಲ್ಲದ ಉತ್ತರ ಪತ್ರಿಕೆಗೆ ಸದರಿ ವಿದ್ಯಾರ್ಥಿಗಳು ಸಂಬಂಧಪಟ್ಟ ಪರೀಕ್ಷೆಯ ಇತರ ವಿಷಯಗಳಲ್ಲಿ ಪಡೆದುಕೊಂಡ ಅಂಕಗಳ ಸರಾಸರಿಯನ್ನು ನಿಗದಿಪಡಿಸಿ, ನಂತರ ವರದಿಯೊಂದಿಗೆ ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟ್ ಸೂಚಿಸಿತು.



26/2/24

**ವಿಷಯ ಸಂಖ್ಯೆ 20:** ದಿನಾಂಕ 23.01.2017 ರಂದು ಜರುಗಿದ 3ನೇ ಸೆಮಿಸ್ಟರ್ ಎಂ.ಬಿ.ಎ ಪದವಿಯ Fashion Design ವಿಷಯಕ್ಕೆ ಸರಾಸರಿ ಅಂಗಳನ್ನು ನಮೂದಿಸಿ, ಫಲಿತಾಂಶವನ್ನು ಪ್ರಕಟಿಸುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟಿನ್ ವಿದ್ಯಾರ್ಥಿಯಾದ ಶ್ರೀ ಎಲ್. ಕಿರಣ್ ಕುಮಾರ್, ನೋಂದಣಿ ಸಂಖ್ಯೆ 14SLCMD111 ಈ ವಿದ್ಯಾರ್ಥಿಯ 3ನೇ ಸೆಮಿಸ್ಟರ್ ಎಂ.ಬಿ.ಎ. ಕೋರ್ಸಿನ Fashion Design ವಿಷಯದಲ್ಲಿ ಪರೀಕ್ಷೆಗೆ ಹಾಜರಾಗಿದ್ದು, ಪರೀಕ್ಷಾ ಫಲಿತಾಂಶ ಪ್ರಕಟವಾಗದ ಕಾರಣ ವಿದ್ಯಾರ್ಥಿಯು ಕರ್ನಾಟಕ ಲೋಕಾಯುಕ್ತದಲ್ಲಿ ದೂರು ಸಲ್ಲಿಸಿದ್ದು, ಮಾನ್ಯ ಲೋಕಾಯುಕ್ತರು ಈ ವಿದ್ಯಾರ್ಥಿಯು ಇತರ ವಿಷಯಗಳಲ್ಲಿ ಪಡೆದಿರುವ ಅಂಕಗಳ ಸರಾಸರಿ ಆಧಾರದಮೇಲೆ, ಸರಾಸರಿ ಅಂಕವನ್ನು ಲೆಕ್ಕ ಹಾಕಿ Fashion Design ವಿಷಯದ ಪತ್ರಿಕೆಗೆ ಫಲಿತಾಂಶ ಪ್ರಕಟಿಸಿ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ದಿನಾಂಕ:08.02.2024ರ ಒಳಗೆ ಸಲ್ಲಿಸಲು ಆದೇಶಿಸಿದ್ದರಿಂದ, ಇಂತಹುದೇ ಪ್ರಕರಣಗಳಲ್ಲಿ ತೆಗೆದುಕೊಂಡ ನಿರ್ಣಯದನುಸಾರ ಸದರಿ ವಿದ್ಯಾರ್ಥಿಯು 3ನೇ ಸೆಮಿಸ್ಟರ್‌ನಲ್ಲಿ ಇತರೇ ವಿಷಯಗಳಲ್ಲಿ ತೆಗೆದುಕೊಂಡ ಸರಾಸರಿ ಅಂಕಗಳನ್ನು ಲೆಕ್ಕ ಹಾಕಿ Fashion Design ವಿಷಯಕ್ಕೆ ನಿಗದಿಪಡಿಸಿ ಫಲಿತಾಂಶವನ್ನು ಪ್ರಕಟಿಸಿ ಮಾನ್ಯ ಕರ್ನಾಟಕ ಲೋಕಾಯುಕ್ತಕ್ಕೆ ವರದಿಸಲ್ಲಿಸಲಾಗಿದ್ದು. ಸದರಿ ವಿಷಯವನ್ನು ಸಿಂಡಿಕೇಟಿನ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಎಲ್. ಕಿರಣ್ ಕುಮಾರ್, ನೋಂದಣಿ ಸಂಖ್ಯೆ 14SLCMD111 ಈ ವಿದ್ಯಾರ್ಥಿಯ 3ನೇ ಸೆಮಿಸ್ಟರ್ ಎಂ.ಬಿ.ಎ. ಕೋರ್ಸಿನ Fashion Design ವಿಷಯದ ಫಲಿತಾಂಶ ಪ್ರಕಟಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 173rd meeting of the Syndicate held on 20.02.2024*

**ವಿಷಯ ಸಂಖ್ಯೆ 21:** ದಿನಾಂಕ 12.02.2024 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 12.02.2024 ರಂದು ನಡೆದ ಕೇಂದ್ರ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು.



26/2/24

**ವಿಷಯ ಸಂಖ್ಯೆ 22:** 2018–19ನೇ ಸಾಲಿನ ಶೈಕ್ಷಣಿಕ ಸಾಲು ಹಾಗೂ ಅದರ ಹಿಂದಿನ ಸಾಲುಗಳಲ್ಲಿ ಸ್ನಾತಕ (under-graduate) ಮತ್ತು ಸ್ನಾತಕೋತ್ತರ ಪದವಿಗಳಿಗೆ (Post-graduate) ಪ್ರವೇಶಾತಿ ಪಡೆದು (ಸೆಮಿಸ್ಟರ್ ಮತ್ತು ವಾರ್ಷಿಕ ಪದ್ಧತಿಯಡಿ) ಪದವಿ ಮುಗಿಸಲು ನಿಗದಿಪಡಿಸಿರುವ ನಿರ್ಧಿಷ್ಟ ಕಾಲಮಿತಿ ಮೀರಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಒಂದು ಬಾರಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುಮತಿ ನೀಡುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ಅವರು ಮಾತನಾಡಿ, 2004ನೇ ಸಾಲಿನಿಂದ 2016ನೇ ಸಾಲಿನವರೆಗೆ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶದಂತೆ, ಕಳೆದ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷೆ ನಡೆಸಲಾಗಿದೆ. 2014–15ರಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಪಠ್ಯಕ್ರಮಗಳು Choice Based Credit System ಗೆ ಬದಲಾಗಿದ್ದು, 2014–15 ಹಾಗೂ ನಂತರದ ಸಾಲಿನಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಲು ತೊಂದರೆ ಇರುವುದಿಲ್ಲ. ಆದರೆ, 2014–15ನೇ ಸಾಲಿಗಿಂತ ಹಿಂದಿನ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು ಕಷ್ಟಕರವಾಗಿರುತ್ತದೆ. ಆದುದರಿಂದ ಈ ವಿದ್ಯಾರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮದಡಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಈ ವಿದ್ಯಾರ್ಥಿಗಳನ್ನು ನೋಂದಣಿ ಮಾಡಿಸಿಕೊಂಡು ಅವರು ಅನುತ್ತೀರ್ಣವಿಷಯಗಳಿಗೆ ಪರಿಷ್ಕೃತ ಪಠ್ಯಕ್ರಮದಡಿ ತತ್ಸಮಾನ ವಿಷಯಗಳನ್ನು ನಿಗದಿಪಡಿಸಿ ನಂತರ ಪರೀಕ್ಷೆ ನಡೆಸಬೇಕಾಗುತ್ತದೆ ಎಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಒಂದೆರಡು ವಿಷಯಗಳಲ್ಲಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶದಂತೆ ಅವರ ಪದವಿಯನ್ನು ಪೂರ್ಣಗೊಳಿಸಲು ಅನುಕೂಲ ಮಾಡಿಕೊಡುವ ಹಿತದೃಷ್ಟಿಯಿಂದ 2014–15ನೇ ಸಾಲಿಗಿಂತ ಹಿಂದಿನ ವಿದ್ಯಾರ್ಥಿಗಳಿಗೆ ಅವರು ಅನುತ್ತೀರ್ಣಗೊಂಡ ವಿಷಯಗಳಿಗೆ ನೋಂದಣಿ ಮಾಡಿಸಿ ತತ್ಸಮಾನ ವಿಷಯಗಳನ್ನು ನಿಗದಿಪಡಿಸಿ, 2018–19ನೇ ಶೈಕ್ಷಣಿಕ ವರ್ಷ ಹಾಗೂ ಅದರ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಪ್ರವೇಶ ಪಡೆದು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಒಳಗೊಂಡಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಅವಕಾಶದಂತೆ, ಪರೀಕ್ಷೆ ನಡೆಸಲು ಸಿಂಡಿಕೇಟ್ ಅನುಮೋದಿಸಿತು.

ಮುಂದುವರೆದು, ಸ್ವಾಯತ್ತ ಕಾಲೇಜುಗಳೂ ಸದರಿ ನಿರ್ಣಯದನುಸಾರ ಪರೀಕ್ಷೆ ನಡೆಸಲು ಸೂಚಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.



26/2/24

**ವಿಷಯ ಸಂಖ್ಯೆ 23:** 2024–25ನೇ ಸಾಲಿಗೆ ಕೆಲವು ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

ಕುಲಪತಿಯವರು ಮಾತನಾಡಿ, 2024–25ನೇ ಸಾಲಿಗೆ ಸ್ವಾಯತ್ತತೆಯನ್ನು ಕೋರಿ ಅರ್ಜಿ ಸಲ್ಲಿಸಿದ್ದ ಮೂರು ಕಾಲೇಜುಗಳಿಗೆ ಸ್ಥಾಯಿ ಸಮಿತಿಯು ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿರುತ್ತದೆ. ಸಮಿತಿಯು ಸ್ವಾಯತ್ತತೆಯನ್ನು ನೀಡಲು ಶಿಫಾರಸ್ಸು ಮಾಡಿರುವುದಾಗಿ ತಿಳಿಸಿ, ಈ ಕಾಲೇಜುಗಳಿಗೆ ವಿಶ್ವವಿದ್ಯಾಲಯದ ಅನುದಾನ ಆಯೋಗವು ಸಹ ಸ್ವಾಯತ್ತತೆಯನ್ನು ಮಂಜೂರು ಮಾಡಿದೆ ಎಂದು ಸಭೆಯ ಗಮನಕ್ಕೆ ತಂದರು.

| ಕ್ರ.ಸಂ. | ಕಾಲೇಜು | ಯುಜಿಸಿ ಪತ್ರ ಮತ್ತು ಅವಧಿ | ಸ್ಥಾಯಿ ಸಮಿತಿ ಶಿಫಾರಸ್ಸು | ಷರಾ |
|---|---|---|---|---|
| 1. | ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸಸ್, ಕೊಮ್ಮಘಟ್ಟ ವಿಲೇಜ್, ಕೆಂಗೇರಿ, ಬೆಂಗಳೂರು–560 060. (ವರದಿ ದಿನಾಂಕ:08.02.2024) | F.-2-10/2023(AC-Policy) dt.:19.01.2024 (2024-25 to 2034-35) | ಸ್ವಾಯತ್ತತೆಗೆ ಶಿಫಾರಸ್ಸು ಮಾಡಿರುತ್ತಾರೆ | ಕಾಲೇಜಿನವರು ಕೋರಿರುವಂತೆ ಕೆಲವು ಕೋರ್ಸುಗಳನ್ನು ಸ್ವಯಂಮುಚ್ಚಲು ಹಾಗೂ ವಿದ್ಯಾರ್ಥಿ ಪ್ರಮಾಣಗಳನ್ನು ಇಳಿಕೆ ಮಾಡಲು ಶಿಫಾರಸ್ಸು ಮಾಡಿದೆ. |
| 2. | ಸೈಂಟ್ ಕ್ಲಾರೆಟ್ ಕಾಲೇಜು, ಎಂ.ಇ.ಎಸ್. ರಸ್ತೆ, 5ನೇ ಕ್ರಾಸ್, 1ನೇ ಮುಖ್ಯರಸ್ತೆ, ಶಾರದಾಂಬನಗರ, ಬೆಂಗಳೂರು–560 013 (ವರದಿ ದಿನಾಂಕ:08.02.2024) | F.-2-10/2023(AC-Policy) dt.:19.01.2024 (2024-25 to 2034-35) | ಸ್ವಾಯತ್ತತೆಗೆ ಶಿಫಾರಸ್ಸು ಮಾಡಿರುತ್ತಾರೆ | ಬಿಸಿಎ–60, ಬಿಬಿಎ–60, ಎಂ.ಎಸ್ಸಿ.(ಮನಃಶಾಸ್ತ್ರ)–10 ಮತ್ತು ಎಂ.ಎಸ್.ಡಬ್ಲ್ಯೂ–10 ಕೋರ್ಸುಗಳಿಗೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣಕ್ಕೂ ಸಹ ಶಿಫಾರಸ್ಸು ಮಾಡಲಾಗಿದೆ. |
| 3. | ಸೈಂಟ್ ಪ್ರಾನ್ಸಿಸ್ ಡಿ ಸೇಲ್ಸ್ ಕಾಲೇಜು, ಎಲೆಕ್ಟ್ರಾನಿಕ್ ಸಿಟಿ ಅಂಚೆ, ಬೆಂಗಳೂರು–560 100. (ವರದಿ ದಿನಾಂಕ:09.02.2024) | F.-2-10/2023(AC-Policy) dt.:19.01.2024 (2024-25 to 2028-29) | ಸ್ವಾಯತ್ತತೆಗೆ ಶಿಫಾರಸ್ಸು ಮಾಡಿರುತ್ತಾರೆ (5 ವರ್ಷದ ಅವಧಿಗೆ) | ಬಿಸಿಎ–20, ಬಿಬಿಎ–40, ಕೋರ್ಸುಗಳಿಗೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ ಹಾಗೂ ಬಿ.ಎ.(ಡ್ಯಾನ್ಸ್)–30, ಎಂ.ಎಸ್.ಡಬ್ಲ್ಯೂ–20 ಮತ್ತು ಎಂ.ಸಿ.ಎ.–60 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲೂ ಮತ್ತು ಆಡಳಿತ ಮಂಡಳಿಯನ್ನು *ಕರ್ನಾಟಕ ಫ್ರಾನ್ಸೇಲಿಯನ್ ಸೊಸೈಟಿಯಿಂದ* **ಸೈಂಟ್ ಫ್ರಾನ್ಸಿಸ್ ಸೇಲ್ಸ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್**ನ ಬದಲಾವಣೆಗೂ ಸಹ ಶಿಫಾರಸ್ಸು ಮಾಡಲಾಗಿದೆ. |



26/2/24

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಸ್ವಾಯತ್ತ ಪರಿನಿಯಮಾವಳಿಯ ಪ್ರಕರಣ 4.6ರ ಅಡಿಯಲ್ಲಿ ಸ್ಥಾಯಿ ಸಮಿತಿಯ ವರದಿಗಳನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸದರಿ ವರದಿಗಳಿಗೆ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯ ಪಡೆದ ನಂತರ ಕಾಲೇಜುಗಳ ಸ್ವಾಯತ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಹ ನಿರ್ಣಯಿಸಿತು.

***Proceedings of the 173rd meeting of the Syndicate held on 20.02.2024***

**Item No. 24:** To consider the reports of Screening cum Evaluation/Selection Committee under UGC-CAS for promotion under the faculty of Arts & Education as per the Statutes notified on 30.05.2024

The Vice-Chancellor briefed the Syndicate that as per the UGC guidelines and approved Statutes, the applications and publications submitted by the faculty members for promotion from the cadre of Professor (Academic level-14) to the cadre of Senior Professor (Academic level -15) under UGC-CAS scheme have been sent to three outside experts, in the concerned subjects. The favourable reports received from the experts are placed before the respective Selection Committees.

With the consent of the members, the sealed covers containing the proceedings of the Selection Committee meetings were opened and placed before the Syndicate.

***Resolution:***

After detailed discussion, the Syndicate resolved to approve the proceedings of the following Selection Committees for promotion Teachers from the cadre of Professor to the cadre of Senior Professor (Academic level 14 to 15) under the faculty of Arts & Education as per the Statutes notified on 30.05.2022.

**I. Selection Committee in Physical Education (21-01-2024)**

"The Selection Committee assessed the candidate based on the interaction with the candidate, 10 best publications during the assessment period, research, academic achievements and favourable review reports from three experts in respect of publications and research work of the above candidate, as per the Statutes related to promotion of Academic Staff of



26/2/24

Bangalore University under the Career Advancement Scheme (assented by the Chancellor on 23.05.2022) (7th CPC of UGC), recommends for promotion of Prof. P.C. Krishnaswamy, from Professor (Academic level 14) to Senior Professor (Academic level 15) under CAS **with effect from 15th May, 2023**, i.e. from the date of fulfilling the requirements."

**II. Selection Committee in Dept. of Sociology (29-01-2024)**

"The Selection Committee assessed the candidates based on the interaction with the candidates, 10 best publications during the assessment period, research, academic achievements and favourable review reports from three experts in respect of publications and research work of the above candidates, as per the Statutes related to promotion of Academic Staff of Bangalore University under the Career Advancement Scheme (assented by the Chancellor on 23.05.2022) (7th CPC of UGC), recommends for promotion of the following Professors from Professor (Academic level 14) to Senior Professor (Academic level 15) under CAS **with effect from the date as shown against their names**, i.e. from the date of fulfilling the requirements.

1. Prof. Chikkamelurappa - w.e.f. 16th March 2019
2. Prof. Samata B. Deshmane- w.e.f. 23rd March 2023"

**III. Selection Committee in Dept. of Economics (13-02-2024)**

"The Selection Committee assessed the candidate based on the interaction with the candidate, 10 best publications during the assessment period, research, academic achievements and favourable review reports from three experts in respect of publications and research work of the above candidate, as per the Statutes related to promotion of Academic Staff of Bangalore University under the Career Advancement Scheme (assented by the Chancellor on 23.05.2022) (7th CPC of UGC), recommends for promotion of Dr. T. Rajendra Prasad, from Professor (Academic level 14) to Senior Professor (Academic level 15) under CAS **with effect from 24.12.2019**, i.e. from the date of fulfilling the requirements."

**ವಿಷಯ ಸಂಖ್ಯೆ 25: 2023-2024**ನೇ ಸಾಲಿಗೆ ಮರು ಪರಿವೀಕ್ಷಣೆ ನಡೆಸಿ ಶಿಫಾರಸ್ಸು ಮಾಡಲ್ಪಟ್ಟ ಹೊಸ ಕಾಲೇಜುಗಳ ಪ್ರಸ್ತಾವನೆಯ ಬಗ್ಗೆ.

**ನಿರ್ಣಯ:**

2023-24ನೇ ಸಾಲಿನಲ್ಲಿ, ಈ ಕೆಳಕಂಡ ಹೊಸ ಕಾಲೇಜುಗಳಿಗೆ ದಿನಾಂಕ; 16-09-2023ರಂದು ಜರುಗಿದ ಸಿಂಡಿಕೇಟ್ ನಿರ್ಣಯದಂತೆ, ಮರುಪರಿವೀಕ್ಷಣೆಗೆ ಆದೇಶಿಸಿದ್ದರಿಂದ ಹೊಸ ಕಾಲೇಜು ಸಂಯೋಜನೆ



26/2/24

ಕುರಿತು ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರುಗಳು ಪರಿವೀಕ್ಷಣೆಯನ್ನು ನಡೆಸಿ ಸಲ್ಲಿಸಿದ ವರದಿಯನ್ನು ದಿನಾಂಕ: 28-12-2023ರಂದು ಜರುಗಿದ ಸಿಂಡಿಕೇಟ್ ಸಭೆಯು ಅನುಮೋದನೆಗೊಂಡಿರುವ ಕಾರಣ, ವಿಳಂಬವನ್ನು ಮನ್ನ ಮಾಡಿ, ಯುಯುಸಿಎಂಎಸ್ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮತಿ ಕೋರಿ ಸರ್ಕಾರಕ್ಕೆ ವಿವರವಾದ ಪತ್ರ ಬರೆಯಲು ಸಿಂಡಿಕೇಟ್ ನಿರ್ಣಯಿಸಿತು.

| **ಆ. ಪ್ರೊ. ಎಂ. ನಾರಾಯಣಸ್ವಾಮಿ, ಸಿಂಡಿಕೇಟ್ ಸದಸ್ಯರು,ಡೀನರು ಶಿಕ್ಷಣ ನಿಕಾಯ, ಬೆಂ.ವಿ.ವಿ, ಬೆಂಗಳೂರು** | | |
|---|---|---|
| 1. | ನಿಸರ್ಗ ಪ್ರಥಮದರ್ಜೆಕಾಲೇಜು,<br>ನಂ.18/1, ನೆಲಗದರನಹಳ್ಳಿ, ನಾಗಸಂದ್ರ ಅಂಚೆ,<br>ಬೆಂಗಳೂರು-560 073<br>(ಹೊಸ ಸಂಯೋಜನೆ ವರದಿ ದಿನಾಂಕ; 28-11-2023) | ಹೊಸ ಸಂಯೋಜನೆಗೆ ಶಿಫಾರಸ್ಸು ಮಾಡಿದೆ<br>(68.58)<br>(ಬಿ.ಕಾಂ.-100, ಬಿಸಿಎ -60) |
| 2. | ಇ.ಕೆ.ಎ.ಎಂ. ಕಾಲೇಜು,<br>ಎಸ್.ವೈ. ನಂ.388, 6ನೇ ಮುಖ್ಯರಸ್ತೆ, 17ನೇ ಕ್ರಾಸ್,<br>ಸೂರ್ಯನಗರ 2ನೇ ಫ್ಲೇಸ್, ಬೆಂಗಳೂರು-562 106.<br>(ಹೊಸ ಸಂಯೋಜನೆ ವರದಿ ದಿನಾಂಕ; 28-11-2023) | ಹೊಸ ಸಂಯೋಜನೆಗೆ ಶಿಫಾರಸ್ಸು ಮಾಡಿದೆ<br>(53.31)<br>{ಬಿ.ಎಸ್ಸಿ.(ಜೀವತಂತ್ರಜ್ಞಾನ)-30, (ರಸಾಯನಶಾಸ್ತ್ರ)-30, (ಗಣಕವಿಜ್ಞಾನ)-30} |

ವಂದಾನರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
**ಕುಲಪತಿಯವರು**

ಸಹಿ/-
**ಕುಲಸಚಿವರು**

//ಪ್ರತಿ//

26/2/24

ಕುಲಸಚಿವರು